ತಂದಿದ್ದ ಚಪಾತಿ ಬುತ್ತಿಯಿಂದ ಕಳೆಯಿತು.

ನಮ್ಮ ಅಪಾರ್ಟ್‌ಮೆಂಟ್ ಇದ್ದ ಜಾಗ ನಗರದ ಡೌನ್-ಟೌನ್. ಹಳೆಯ ನಗರದ ಭಾಗ. ನಾವು ನೋಡಬೇಕಾದ ಮುಖ್ಯ ಸ್ಥಳಗಳೆಲ್ಲಾ 1-2 ಮೈಲು ಹತ್ತಿರದಲ್ಲಿರುವಂಥವು. ಇಲ್ಲಿಯ ಭಾಗದ ರಸ್ತೆಗಳ ಅಗಲ ಕಡಿಮೆಯಾದರೂ ಅಚ್ಚುಕಟ್ಟಾಗಿವೆ. ರಸ್ತೆಯ ಇಕ್ಕೆಲಗಳಲ್ಲಿ ಒತ್ತೊತ್ತಾದ ಕಟ್ಟಡಗಳು. ಎರಡೂ-ಕಡೆ ಸಿಮೆಂಟಿನ ಚಿಕ್ಕ ಪಾದಚಾರಿ ರಸ್ತೆಗಳು. ಎಲ್ಲೆಡೆ ಸ್ವಚ್ಛತೆ. ನೂರಿನ್ನೂರು ಮೀಟರಿಗೆ ಒಂದೊಂದು ಮುಚ್ಚಳವಿರುವ ಕಸದ ಡಬ್ಬಿಗಳು. ಕುಂಡಗಳಲ್ಲಿ ಬೆಳೆಸಿದ ಹೂ ಗಿಡಗಳು, ಪುದಿನ, ರೋಸ್ಮೆರಿ, ಬೆಸಿಲ್, ಥೈಮ್, ಸೇಜ್, ಮರುಗ, ದವನ ಗಿಡಮೂಲಿಕೆಗಳನ್ನೂ ಬೆಳೆಸುತ್ತಾರೆ.

ನಮ್ಮ ಮೊದಲ ದಿನದ ಕಾರ್ಯಕ್ರಮ ಅಕ್ರೊಪೊಲಿಸ್ ಮ್ಯೂಸಿಯಂ ವೀಕ್ಷಣೆ. ಅಕ್ರೊಪೊಲಿಸ್ ಬೆಟ್ಟ ಹಾಗೂ ಸುತ್ತಲಿನ ಪ್ರದೇಶ ಗ್ರೀಕ್ ನಾಗರಿಕತೆ ಬೆಳೆದು ಮೆರೆದ ಸ್ಥಳ. ಕಾಲಾನುಕ್ರಮದಲ್ಲಿ ಮಣ್ಣಿನಿಂದ ಮುಚ್ಚಿ ಮರೆಯಾಗಿ ಹೋಗಿದ್ದುದನ್ನು ಉತ್ಖನನ ಮಾಡಿ ಸಿಕ್ಕಿದ ಲೆಕ್ಕವಿಲ್ಲದಷ್ಟು ದೇವಾನುದೇವತೆ-ಗಳ ವಿಗ್ರಹಗಳನ್ನು ಉತ್ಖನನ ನಡೆಸಿದ ಜಾಗದ ಮೇಲೆ ನಾಲ್ಕು ಅಂತಸ್ತಿನ ಕಟ್ಟಡ ಕಟ್ಟಿ ಸಂರಕ್ಷಿಸಿ ಇಟ್ಟಿದ್ದಾರೆ. ಕೆಳ ಅಂತಸ್ತಿನಲ್ಲಿ ಮಾಡಿರುವ ಉತ್ಖನನ-ವನ್ನು ವೀಕ್ಷಿಸಲು ದಪ್ಪ ಗಾಜಿನ ನೆಲವನ್ನು ನಿರ್ಮಿಸಿದ್ದಾರೆ. ಅಕ್ರೊಪೊಲಿಸಿ-ನಲ್ಲಿರುವ ಕಟ್ಟಡಗಳೆಲ್ಲಾ ಅಮೃತಶಿಲೆಯವು. ಇದರಲ್ಲಿ ಕಬ್ಬಿಣದ ಅಂಶ ಕೂಡಿರುವುದರಿಂದ ಅವು ಮಣ್ಣು ಮೆತ್ತಿದಂತೆ ಮಾಸು ಬಣ್ಣ ಹೊಂದಿವೆ.

ಕ್ರಿಸ್ತ ಪೂರ್ವ 4ರಿಂದ 5ನೇ ಶತಮಾನದಲ್ಲಿಯೇ ಗ್ರೀಕ್ ನಾಗರಿಕತೆ ಉನ್ನತವಾಗಿತ್ತು. ಬಲಶಾಲಿ ಸಾಮ್ರಾಜ್ಯಗಳು ಸ್ಥಾಪನೆಯಾಗಿದ್ದವು. ಭಾರತದ ಮೇಲೆ ಯುದ್ಧಕ್ಕೆ ಬಂದಿದ್ದ ಅಲೆಕ್ಸಾಂಡರನೂ ಇಲ್ಲಿಯವನೇ. ಆ ಕಾಲದಲ್ಲಿ ಅಥೆನಾ ದೇವಿಗಾಗಿ ಭವ್ಯವಾದ ದೇವಾಲಯವನ್ನು ಅಕ್ರೊಪೊಲಿಸ್ ಬೆಟ್ಟದ ಮೇಲೆ ನಿರ್ಮಿಸಲಾಗಿತ್ತು. ಇದೇ ಪಾರ್ಥೆನಾನ್. ಎತ್ತರವಾದ ಅಮೃತಶಿಲೆಯ ಕಂಬಗಳಿಂದ ಕೂಡಿದ್ದು ಅದರ ಸೂರು ನಾಶವಾಗಿ ನೆಲ ಹಾಗೂ ಕಂಬಗಳಷ್ಟೇ ಉಳಿದಿವೆ. ಮ್ಯೂಸಿಯಂನ ವಿಗ್ರಹಗಳು ಸ್ವಲ್ಪ ಮುಕ್ಕಾಗಿದ್ದರೂ ಎಲ್ಲವೂ ದೈತ್ಯಾಕಾರದವು. 20 ಅಡಿಗಳನ್ನೂ ಮೀರುತ್ತವೆ. ಆದರೆ ಎಲ್ಲಾ ಪ್ರಮಾಣ-ಬದ್ಧವಾದ ಕೆತ್ತನೆಗಳಿಂದಾಗಿ ಅಂದಿನ ಶಿಲ್ಪಿಗಳ ಕಲಾವಂತಿಕೆಗೆ ಸಾಕ್ಷಿಯಂತಿವೆ.

ಪಾರ್ಥೆನಾನ್ ವೀಕ್ಷಣೆ: ಅಥೆನ್ಸ್ ಹೃದಯ ಭಾಗದಲ್ಲಿರುವ ಸಿಂಟಾಗ್ಮ ಸ್ಕ್ವೇರ್ ನಲ್ಲಿರುವ ಮೆಟ್ರೊ ಸ್ಟೇಶನ್ ಒಳಗಿರುವ ಮ್ಯೂಸಿಯಂ, ಹತ್ತಿರದಲ್ಲೇ ಇರುವ, ವಿವಿಧ ಜಾತಿಯ ಮರಗಳಿಂದ ಕೂಡಿದ ನ್ಯಾಷನಲ್ ಗಾರ್ಡನ್ಸ್ ವೀಕ್ಷಿಸಿದೆವು. ದಾರಿಯಲ್ಲಿ 'ಘೂಸ್' ದೇವತೆಗಾಗಿ (ರೋಮ್‌ನ ಜ್ಯೂಪಿಟರ್) ನಿರ್ಮಿಸಿದ್ದ ದೇಗುಲದ ಅವಶೇಷಗಳಿವೆ. ಅಲ್ಲಿಂದ ಮುಂದಕ್ಕೆ ಹೇಡ್ರಿಯನ್ಸ್ ಆರ್ಚ್ ಕಾಣಸಿಗುತ್ತದೆ. ಹೇಡ್ರಿಯನ್ 2ನೇ ಶತಮಾನದ ಪ್ರಮುಖ ರಾಜ.

ಅಕ್ರೊಪೊಲಿಸ್ ಬೆಟ್ಟ: ಈ ಬೆಟ್ಟದ ಶಿಲೆಯೆಲ್ಲವೂ ಅಮೃತಶಿಲೆ. ಹತ್ತಲು ಕೆತ್ತಿದ ಮೆಟ್ಟಿಲುಗಳು ಅಷ್ಟೇನು ಸುಸ್ಥಿಯಲ್ಲಿಲ್ಲ. ಮುಕ್ಕಾಲು ಪಾಲು ಸವೆದಿದೆ. ಪ್ರಯಾಸದಿಂದ ಹತ್ತುತ್ತ ಹೋದಂತೆ ಒಂದೆಡೆ 'ಥಿಯೇಟರ್ ಆಫ್ ಡಯೋನಿಸಸ್' ಸಿಗುತ್ತದೆ. ಪ್ರಾಚೀನ ಕಾಲದಲ್ಲಿ ನಾಟಕ, ಸಭೆ ಇತ್ಯಾದಿ ನಡೆಯುತ್ತಿದ್ದ, ಸ್ಟೇಡಿಯಂ ಮಾದರಿಯ ಸ್ಥಳ ಇಂದು ಅತ್ಯಂತ ಶಿಥಿಲಾವಸ್ಥೆಯಲ್ಲಿದೆ. ನಂತರದ ಕಾಲದಲ್ಲಿ ನಿರ್ಮಾಣವಾದ 'ಓಡಿಯನ್ ಆಫ್ ಹೆರಡಸ್ ಅಟ್ಟಿಕಸ್' ಎಂಬ ಅಂತಹದೇ ಸಭಾಂಗಣ ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿದೆ. ಪ್ರಸಿದ್ಧ ಕಲಾವಿದರಾದ ಮಡೊನ್ನ, ಯಾನ್ನಿ ಮುಂತಾದವರು ಇಲ್ಲಿ ಕಾರ್ಯಕ್ರಮ ನಡೆಸಿದ್ದಾರೆ ಎಂದು ನಮ್ಮ ಗೈಡ್ ವಿವರಿಸಿದರು.



ಪಾರ್ಥೆನಾನ್

ಇಲ್ಲಿಂದ ಮುಂದೆ ಸ್ವಲ್ಪ ಪ್ರಯಾಸ ಪಟ್ಟು ಕೆಲವು ಮೆಟ್ಟಿಲುಗಳು ಏರಿದರೆ 'ಅಥೆನ್ಸ್ ನೈಕಿ' ಯ ದೇಗುಲವಿದೆ. ಎತ್ತರವಾದ ಜಗುಲಿಯ ಮೇಲೆ ನಿರ್ಮಿಸಿರುವ ಇದರ ಕಂಬಗಳನ್ನೂ, ಮೇಲಿನ ಸೂರನ್ನೂ ಸುಮಾರಾಗಿ ಸುಸ್ಥಿತಿಗೆ ತಂದಿದ್ದಾರೆ. 'ಅಥೆನ್ಸ್ ನೈಕಿ' ಗೆಲುವಿನ ದೇವತೆಯಂತೆ. ಇನ್ನೂ ಮುಂದೆ ನಡೆದರೆ ಉತ್ತರಕ್ಕೆ ಮತ್ತೊಂದು ವಿಶಾಲವಾದ ದೇಗುಲದ ಅವಶೇಷಗಳಿವೆ. ಇದಕ್ಕೆ 'ಎರೆಕ್ಥಿಯಾನ್' ಎನ್ನುತ್ತಾರೆ. ಇದು ಅಥೆನಾ ಮತ್ತು ಪೊಸೈಡಾನ್ ದೇವರುಗಳ ದೇಗುಲವಂತೆ. ಇದರ ಕಂಬಗಳು ಮತ್ತು ಗೋಡೆಗಳು ಇನ್ನೂ ಉಳಿದಿವೆ. ಆದರೆ ಸೂರು ನಾಶವಾಗಿದೆ.

ಪಾರ್ಥೆನಾನ್: ಇದು ಅಥೆನಾ ದೇವತೆಗಾಗಿ ಕಟ್ಟಿದ ವಿಶಾಲವಾದ ಹಾಗೂ ಎತ್ತರವಾದ ಕಂಬಗಳಿಂದ ಕೂಡಿದ ದೇಗುಲ. ಇದರ ಭಾಗಶಃ ಸೂರು 'ದಿ ಗ್ರೇಟ್ ಟರ್ಕಿಶ್ ವಾರ್' ಯುದ್ಧದಲ್ಲಿ ವೆನೆಶಿಯನ್ನರ ದಾಳಿಯಿಂದ ನಾಶವಾಯಿತು. ಅಳಿದುಳಿದಿರುವುದರ ಸಂರಕ್ಷಣ ಕಾರ್ಯ ನಡೆಯುತ್ತಿದೆ.

ಲೈಕಬೆಟ್ಟಸ್: ಇದು ಅಕ್ರೊಪೊಲಿಸ್ ಬೆಟ್ಟದ ವಿರುದ್ಧ ದಿಕ್ಕಿನಲ್ಲಿದೆ. ಬೆಳಗಿನ ಉಪಾಹಾರವಾಗಿ ಬ್ರೆಡ್, ಕ್ರೊಯ್ಸಾನ್, ಹಣ್ಣುಗಳನ್ನು ತಿಂದು ಟೀ, ಕಾಫಿ ಕುಡಿದೆವು. ನಂತರ 9 ಗಂಟೆಗೆ ಎಲ್ಲರೂ ಅರ್ಧ ಮೈಲು ದೂರದ 'ಸಿಂಟಾಗ್ಮಾ ಸ್ಕ್ವೇರ್' ಸೇರಿದೆವು. ಅದು ನಗರದ ಪ್ರಮುಖ ಸ್ಥಳ. ಅಲ್ಲಿರುವ ಪಾರ್ಲಿಮೆಂಟ್ ಭವನದ ಮುಂದೆ ಗಂಟೆಗೊಮ್ಮೆ ನಡೆಯುವ 'ಚೇಂಜ್ ಆಫ್ ಗಾರ್ಡ್' ಕಾರ್ಯಕ್ರಮ ನೋಡಲು ಜನಸಂದಣಿ ಇರುತ್ತದೆ.

ಬಸ್ ಮೂಲಕ ಪ್ರಯಾಣಿಸಿ ರಸ್ತೆಯುದ್ದಕ್ಕೂ ಇದ್ದ ವಿವಿಧ ದೇಶಗಳ ರಾಯಭಾರ ಕಛೇರಿಗಳನ್ನು ವೀಕ್ಷಿಸುತ್ತಾ ಸಾಗಿದೆವು. ಲೈಕಬೆಟ್ಟಸ್ ಬಳಿಯ ನಿಲ್ದಾಣದಲ್ಲಿ ಇಳಿದು ಹೆಜ್ಜೆ ಹಾಕಿದೆವು. ನಗರದ ಈ ಭಾಗ ಆಧುನಿಕ ಕಟ್ಟಡಗಳಿಂದಲೂ, ಅಗಲವಾದ ರಸ್ತೆಗಳಿಂದಲೂ, ಉದ್ಯಾನವನಗಳಿಂದಲೂ ಕೂಡಿದೆ. ಮತ್ತೆ ಏರು ದಾರಿಯಲ್ಲಿ ನಡೆದು ಸ್ಟೇಷನ್ ತಲುಪಿ ಕೇಬಲ್ ಕಾರ್ ನಲ್ಲಿ ಬೆಟ್ಟದ ಮೇಲೆ ತಲುಪಿದೆವು. ಇದು ಅಕ್ರೊಪೊಲಿಸ್ ಗಿಂತ ಎತ್ತರವಾದ ಹಾಗೂ ಕಡಿದಾದ ಬೆಟ್ಟ. ಮೇಲಿನಿಂದ ಸುತ್ತಲೂ ಹರಡಿರುವ ಪುರಾತನ ಹಾಗೂ ಆಧುನಿಕ ಅಥೆನ್ಸಿನ ದೃಶ್ಯ ಮನೋಹರವಾಗಿ ಕಾಣುತ್ತದೆ. ದೂರದಲ್ಲಿ ಅಥೆನ್ಸ್ ಬಂದರು ಹಾಗೂ ಅದರಾಚೆಗಿನ ಏಜಿಯನ್ ಸಮುದ್ರವನ್ನು ವೀಕ್ಷಿಸಬಹುದು. ಬೆಟ್ಟದಿಂದ ಇಳಿಯಲು ಮೆಟ್ಟಿಲುಗಳು ಇವೆ. ಮತ್ತೆ ಕೇಬಲ್ ಕಾರಿನಲ್ಲೆ ಬೆಟ್ಟದಿಂದ ಇಳಿದು, ಟ್ಯಾಕ್ಸಿ ಹಿಡಿದು ವಾಪಸ್ಸಾದೆವು. ಗ್ಯಾಸ್ ಒಲೆ ಪಾತ್ರೆಗಳಿಂದ ಸಜ್ಜುಗೊಳಿಸಿದ್ದ ಅಡುಗೆಮನೆ ಇದ್ದುದರಿಂದ ನಮ್ಮ ಎಂದಿನ ಅನ್ನ ಹುಳಿ, ಪಲ್ಯ ತಯಾರಿಸಿ ಊಟ ಮಾಡಿದೆವು. ಜೊತೆಗೆ ಸವಿದ 'ಗ್ರೀಕ್ ಯೊಘರ್ಟ್' ಎಂದೇ ಸುಪ್ರಸಿದ್ಧವಾದ ಅಲ್ಲಿಯ ಮೊಸರಿನ ರುಚಿ ಅವಿಸ್ಮರಣೀಯ.